



ಜಿ.ಕೆ. ರವೀಂದ್ರಕುಮಾರ್

# ನನ್ನ ಧ್ಯಾನದ ನಾಡು

**ವಿಶ್ವನಾಥನ** ಸ್ಕ್ವೇರ್ ಕಟ್ ಚಂದ್ರಶೇಖರ ಗೂಗ್ಲಿ ಪ್ರಸನ್ನನ ಸ್ಪಿನ್ನು
ನೋಡಿ ಕೇಳಿ ಹರುಷಗೊಂಡು ಪಡುಕೋಣೆಯ ಡ್ರಾಪಿನಲ್ಲಿ
ಚಪ್ಪಾಳೆ ಹೊಡೆದು ಎದೆ ಸೆಟೆಸಿ ನಡೆದವನು ।

ಭೀಮಸೇನನ ಗಡಸು ಪೀಬಿಯ ಇಂಪು ಕಾಳಿಂಗನ ಭಾವ
ಕೇಳುತ್ತ ಕೇಳುತ್ತ ಮಾಯದ ಮದಗಾದ ಕೆರೆಯ ಹಾಡಿನಲ್ಲಿ
ಮಿಂದು ನೆಂದು ಎದ್ದು ಎದೆಗೊಂಡವನು ।

ತ್ರಿವೇಣಿ ರಾಮರಾಯ ಅನುಪಮಾರ ಪುಟದಲ್ಲಿ ಕಳೆದು
ಪುಟ್ಟಪ್ಪ ಭೈರಪ್ಪ ಬೇಂದ್ರೆಯರ ಕಂಡು ಅಡಿಗರಲ್ಲಿ ತೊಡರಿ
ಕಾವ್ಯದ ಸಾಲುಗಳ ಹಕ್ಕಿ ಹದಗೊಂಡವನು ।

ರಾಮಮೂರ್ತಿಯ ರೇಖೆ ಜೀಕೆ ಸತ್ಯರ ಚೆಲುವೆ ಚಂದ್ರನಾಥರ ಗೂಢ
ಶಿಲಾಬಾಲೆ ಬೆಡಗಿನೊಡನೆ ಶೂನ್ಯ ಕೋಲಾಹಲ ಜರುಗಿ
ಅಲ್ಲಮನ ಮದ್ದಲೆಯ ತಡವಿ ನಿಂತವನು ।